## ಡಾ ವಿಂಚಿ ಕ್ಸಿ ಸರ್ಜಿಕಲ್ ರೊಬಾಟಿಕ್ ಸಿಸ್ಟಮ್



ಅಮೆರಿಕದಲ್ಲಿ ಉತ್ಪಾದನೆಯಾದ ಡಾ ವಿಂಚಿ ಕ್ಸಿ ರೊಬಾಟಿಕ್ ಸರ್ಜಿಕಲ್ ಸಿಸ್ಟಮ್ ಅತ್ಯಾಧುನಿಕ ಶಸ್ತ್ರಚಿಕಿತ್ಸಾ ವಿಧಾನದಲ್ಲಿ ವಿನೂತನ ಸಂಶೋಧನೆ. ಅತ್ಯಧಿಕ ಗುಣಮಟ್ಟದ ಆರೈಕೆಯನ್ನು ರೋಗಿಗಳಿಗೆ ಒದಗಿಸುವ ಬದ್ಧತೆಯನ್ನು ಈ ತಂತ್ರಜ್ಞಾನ ಪ್ರತಿಬಿಂಬಿಸುತ್ತದೆ. ಅಮರಿಕದ ಇಂಟ್ಯೂಟಿವ್ ಸರ್ಜಿಕಲ್ 2000ನೇ ಇಸವಿಯಲ್ಲಿ ಈ ರೊಬಾಟಿಕ್ ತಂತ್ರಜ್ಞಾನವನ್ನು ಕಂಡುಹಿಡಿಯಿತು. ಡಾ ವಿಂಚಿ ಕ್ಸಿ ಅಧಿಕ ರೆಸಲ್ಯೂಶನ್ ಹೊಂದಿದ 3ಡಿ ದೃಶ್ಯಾವಳಿಯನ್ನು ಒದಗಿಸುತ್ತದೆ.

ಈ ರೊಬಾಟ್‌ನಲ್ಲಿ ಎರಡು ಪ್ರಮುಖ ಭಾಗಗಳಿವೆ. ಎರಡೂ ಉಪಕರಣಗಳನ್ನು ಶಸ್ತ್ರಚಿಕಿತ್ಸಾ ಕೊಠಡಿಯೊಳಗೆ ಅಳವಡಿಸಲಾಗಿರುತ್ತದೆ. ಒಂದನ್ನು ರೋಗಿಯ ಕಡೆಗೆ ಹಾಗೂ ಮತ್ತೊಂದು ಭಾಗವನ್ನು ವೈದ್ಯರ ಪಕ್ಕದಲ್ಲಿ ಇರಿಸಲಾಗುತ್ತದೆ. ರೋಗಿಯ ಬಳಿ ಇರುವ ಉಪಕರಣಕ್ಕೆ ನಾಲ್ಕು ಕೈಗಳಿದ್ದು ಶಸ್ತ್ರಚಿಕಿತ್ಸೆಗೆ ಅಗತ್ಯವಿರುವ ಕತ್ತರಿ ಹಾಗೂ ಚೂರಿಯನ್ನು ಹಿಡಿದಿರುತ್ತದೆ. ಅತ್ಯಂತ ಹೈರೆಸಲ್ಯೂಷನ್ ಕ್ಯಾಮೆರಾವನ್ನು ಅಳವಡಿಸಲಾಗಿರುತ್ತದೆ. ವೈದ್ಯರ ಕಡೆ ಇರುವ ಉಪಕರಣದ ಮೂಲಕ ನುರಿತ ರೊಬಾಟಿಕ್ ಸರ್ಜರಿ ತಜ್ಞ ರೋಬಾಟ್‌ನ ಕೈಗಳ ಚಲನೆಯನ್ನು ನಿಯಂತ್ರಿಸುತ್ತಾರೆ. ರೊಬಾಟ್‌ನ ಕೈಗಳು ಹಿಂದೆ ಮುಂದೆ ಮೇಲೆ ಹಾಗೂ ಕೆಳಗೆ ಅಲ್ಲದೆ ಯಾವ ದಿಕ್ಕಿಗೆ ಹೇಗೆ ಬೇಕಾದರೂ ಸುಲಲಿತವಾಗಿ ಸಂಚರಿಸಬಲ್ಲದು. ಹೃದಯದೊಳಗೆ ರಂಧ್ರವನ್ನು ಸರಿಪಡಿಸುವುದು, ಕತ್ತರಿಸಿದ ಭಾಗವನ್ನು ಮೊದಲಿನಂತೆ ಹೊಲಿಗೆ ಹಾಕುವುದು ಎಲ್ಲ ಕಾರ್ಯವನ್ನೂ ವೈದ್ಯರ ನಿಯಂತ್ರಣದಲ್ಲಿ ರೊಬಾಟ್ ಮಾಡುತ್ತದೆ. ಶಸ್ತ್ರಚಿಕಿತ್ಸೆಯೂ ಬೇಗನೆ ಮುಗಿಯುತ್ತದೆ.



ಕ್ಯಾನ್ಸರ್, ಪಿತ್ತಜನಕಾಂಗ, ಯಕೃತ್, ಕಿಡ್ನಿ ಮುಂತಾದ ಭಾಗಗಳಿಗೆ ಈಗಾಗಲೇ ರೊಬಾಟಿಕ್ ತಂತ್ರಜ್ಞಾನದ ಶಸ್ತ್ರಚಿಕಿತ್ಸೆ ಜನಪ್ರಿಯವಾಗಿದ್ದರೂ ಹೃದಯಕ್ಕೆ ರೊಬಾಟ್ ಸಹಾಯದಿಂದ ನಡೆಸಿದ ಶಸ್ತ್ರಚಿಕಿತ್ಸೆ ಬಹಳ ಅಪರೂಪದ್ದು. ಅಲ್ಲದೆ ರೊಬಾಟ್ ಸಹಾಯದಿಂದ ನಡೆಯುವ ಶಸ್ತ್ರಚಿಕಿತ್ಸೆಯಲ್ಲಿ ಸರ್ಜರಿ ನಡೆಯುವ ಭಾಗ ವೈದ್ಯರಿಗೆ ಅತ್ಯಂತ ಸ್ಪಷ್ಟ ಹಾಗೂ ದೃಶ್ಯ ಅತ್ಯಂತ ದೊಡ್ಡದಾಗಿ ಕಾಣಿಸುವುದು ಈ ತಂತ್ರಜ್ಞಾನದ ವೈಶಿಷ್ಟ್ಯ.

'ಹೃದಯದ ಬೈಪಾಸ್ ಸರ್ಜರಿಯನ್ನು ರೊಬಾಟಿಕ್ ತಂತ್ರಜ್ಞಾನದಿಂದ ಮಾಡಲು ಬೆಂಗಳೂರಿನ ಅಪೋಲೊ ಆಸ್ಪತ್ರೆಯ ಮೂವರು ಹೃದಯ ತಜ್ಞರಷ್ಟೇ ತರಬೇತಿ ಪಡೆದು ಪರಿಣತಿ ಸಾಧಿಸಿದವರು. ಅಲ್ಲದೆ ನಮ್ಮ ದೇಶದಲ್ಲಿ ಬೇರೆ ಯಾವ ವೈದ್ಯರೂ ರೊಬಾಟಿಕ್ ತಂತ್ರದಿಂದ ಹೃದಯ ಸರ್ಜರಿ ಮಾಡುವವರಿಲ್ಲ ಎನ್ನುತ್ತಾರೆ ಬೆಂಗಳೂರಿನ ಅಪೋಲೊ ಆಸ್ಪತ್ರೆಯ ಸಿಇಒ ಡಾ.ಕೆ. ಹರಿಪ್ರಸಾದ್.

ಕಳೆದ ಆಗಸ್ಟ್ ತಿಂಗಳಿನಿಂದ ಇದುವರೆಗೆ ಒಟ್ಟು 25 ರೋಗಿಗಳಿಗೆ ಹೃದಯ ಸರ್ಜರಿ ಮಾಡಲಾಗಿದೆ. 23 ವರ್ಷದ ಯುವಕನಿಂದ ಹಿಡಿದು 73 ವರ್ಷದ ವೃದ್ಧನವರೆಗಿನ ರೋಗಿಗಳಿಗೆ ಈ ಶಸ್ತ್ರಚಿಕಿತ್ಸೆ ಮಾಡಿ ಅಪೋಲೊ ಆಸ್ಪತ್ರೆಯ ತಜ್ಞರು ಯಶಸ್ವಿಯಾಗಿದ್ದಾರೆ. ಈ ರೊಬಾಟಿಕ್ ತಂತ್ರಜ್ಞಾನದಿಂದ ಹೃದಯ ಸರ್ಜರಿ ಮಾಡುವುದನ್ನು ಅಪೋಲೊ ಆಸ್ಪತ್ರೆ ತಜ್ಞ ವೈದ್ಯರ ತಂಡ ಈಚೆಗೆ ಅಧಿಕೃತವಾಗಿ ಬೆಂಗಳೂರಿನಲ್ಲಿ ವೈದ್ಯಲೋಕಕ್ಕೆ ಅನಾವರಣಗೊಳಿಸಿತು.

### ಹೃದಯಾಘಾತ; ಆತಂಕ

ಇತ್ತೀಚಿನ ದಿನಗಳಲ್ಲಿ ನಲುವತ್ತು ವರ್ಷದ ಆಸುಪಾಸಿನಲ್ಲಿರುವ ಜನರಲ್ಲಿ ಹೃದಯಾಘಾತ ಹೆಚ್ಚುತ್ತಿರುವ ಕಳವಳಕಾರಿ ಅಂಶವನ್ನು ಹೃದಯ ತಜ್ಞರು ನಡೆಸಿದ ಸಮೀಕ್ಷೆ ಸಾಬೀತುಪಡಿಸಿದೆ. ಜೀವನಶೈಲಿಯ ಬದಲಾವಣೆ, ವ್ಯಾಯಾಮ, ದೈಹಿಕ ಶ್ರಮದ ಕೊರತೆ, ಮಧುಮೇಹ, ಅತಿತೂಕ, ಧೂಮಪಾನ, ಮದ್ಯಪಾನ, ಮನೋ–ಸಾಮಾಜಿಕ (ಸೈಕೋ ಸೋಷಿಯಲ್) ಕಾರಣಗಳು, ಅತಿತೂಕ, ಬೊಜ್ಜು.. ಇವೇ ಮುಂತಾದ ಸಮಸ್ಯೆಗಳಿಂದಾಗಿ ರಾಜ್ಯದಲ್ಲಿ ಹೃದಯಾಘಾತಕ್ಕೊಳಗಾಗಿ ಮೃತಪಡುವವರ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಗಣನೀಯವಾಗಿ ಹೆಚ್ಚಿದೆ. ಉತ್ತಮ ಆರೋಗ್ಯ ಕಾಪಾಡಿಕೊಂಡು ಹೃದಯ ತೊಂದರೆಗಳಿಂದ ಪಾರಾಗಬೇಕಾದರೆ ಮುನ್ನೆಚ್ಚರಿಕೆ ವಹಿಸಲೇ ಬೇಕು.